ಶ್ರೀ ಬಿ. ಸಿ. ನಂಜುಂಡಯ್ಯ.—ಅವರ ಜಪ್ತಿಯಾನಿನಲ್ಲಿ 31 ದಿವಸ ಕೆಲಸಮಾಡಿದೆಯೆಂದು ಹೇಳುತ್ತೀರಾ? ದಯವಿಟ್ಟು ನೋಡಿ ಹೇಳಿ.

ಡಾ॥ ಆರ್. ನಾಗನಗೌಡ.—ಇಲ್ಲ; 31 ಗಂಟೆ ಕೆಲಸಮಾಡಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಎಷ್ಟು ಗಂಟೆಗಳ ಹೊತ್ತು ಆ ಬಲ್‌ಡೋಸರು sick ಆಗಿತ್ತು.

ಡಾ॥ ಆರ್. ನಾಗನಗೌಡ.—9 ದಿನಗಳು ಒಟ್ಟು ಕೆಲಸಮಾಡಿದೆ. ಕೆಲಸಮಾಡಿರುವುದು 31 ಗಂಟೆಗಳ ಕಾಲ. ದಿನಕ್ಕೆ 8 ಗಂಟೆಗಳ ಕಾಲ ಕೆಲಸಮಾಡಿ ತೆಂದರೆ ಎಷ್ಟು ಗಂಟೆಗಳು sickನಲ್ಲಿತ್ತು ಎಂಬದನ್ನು ಲೆಕ್ಕಹಾಕಬಹುದು.

ಶ್ರೀ ಬಿ. ಸಿ. ನಂಜುಂಡಯ್ಯ.—31 ಗಂಟೆಗಳಕಾಲ ಕೆಲಸಮಾಡಿದೆಯೆಂದರೆ ಎಷ್ಟು ಹಣ ಚಾರ್ಜ್ ಆಯಿತು?

ಡಾ॥ ಆರ್. ನಾಗನಗೌಡ.—ದರವನ್ನು ಹೇಳಿದ್ದೇನೆ. 300 (ಚಿಲ್ಲರೆ) ರೂಪಾಯಿಗಳಷ್ಟು ಖರ್ಚಾಗಿದೆ. ಬಾಕಿ ಹಣ ನಮ್ಮಲ್ಲಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಅಲ್ಲಿ ಬಾಕಿ ಕೆಲಸ ಎರಡು ವರ್ಷಗಳಿಂದ ಆಗದೆ ಹಾಗೆಯೇ ಉಳಿದಿಲ್ಲವೆ?

ಡಾ॥ ಆರ್. ನಾಗನಗೌಡ.—ಬುಲ್‌ಡೋಸರಿಗೆ major sickness ಉಂಟಾದ್ದರಿಂದ ಆಸ್ಪತ್ರೆಗೆ ಕಳುಹಿಸಬೇಕಾಯಿತು. ಅಲ್ಲಿ ರಿಪೇರಿಯಾಗುವುದಕ್ಕೆ ಒಂದೆರಡು ತಿಂಗಳು ಹಿಡಿಯಿತು. ಅದಾದನಂತರವೂ ಅದನ್ನು ಅಲ್ಲಗೆ ಕಳುಹಿಸಿ ಕೊಡಲಿಲ್ಲ. ಕಾರಣ ಏನೆಂದರೆ, ಅಲ್ಲಿ soil conditions ಬಹಳ hard ಆಗಿರುವುದರಿಂದಲೂ ಮತ್ತು ಬೇರೆ ಕಡೆಯಿಂದ ಡಿಮ್ಯಾಂಡ್ ಬಂದದ್ದರಿಂದಲೂ ಸಾಧ್ಯವಾಗಲಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಎರಡು ವರ್ಷಗಳಲ್ಲಿ ಅದು ಬೇರೆ ಯಾವ ಗ್ರಾಮಕ್ಕೂ ಹೋಗಿರಲಿಲ್ಲವೆ?

ಡಾ॥ ಆರ್. ನಾಗನಗೌಡ.—ಗುಬ್ಬಿಗೆ ಹೋಗಿದೆ; ಸಿರಾಕ್ಕೂ ಹೋಗಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಹೀಗೆ ಅಲ್ಲಿಗೆ ಹೋಗಿದ್ದಾಗ ಪಕ್ಕದಲ್ಲಿರುವ ಇವರ ಜಪ್ತಿಯಾನಿಗೇಕೆ ಕಳುಹಿಸಿಕೊಡಲಿಲ್ಲ?

ಡಾ॥ ಆರ್. ನಾಗನಗೌಡ.—ನಮ್ಮಲ್ಲಿ ಕಮ್ಮಿ ಸಂಖ್ಯದಲ್ಲಿ ಬುಲ್‌ಡೋಸರುಗಳಿವೆ. ನಾನಾ ಕಡೆಯಿಂದ ಡಿಮ್ಯಾಂಡಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಡಿಮ್ಯಾಂಡಿದ್ದರೂ, priorityಯನ್ನು ಗೊತ್ತುಮಾಡಿಕೊಂಡು ಮಾಡುವುದಕ್ಕಾಗುವುದಿಲ್ಲವೆ?

ಡಾ॥ ಆರ್. ನಾಗನಗೌಡ.—ನಾನಾಗಲೇ ಹೇಳಿದ ಹಾಗೆ, ಎರಡು ಮೂರು ಬುಲ್‌ಡೋಜರುಗಳು ಮಾತ್ರ ನಮ್ಮಲ್ಲಿವೆ. Demand ಬಹಳ ಇರುತ್ತದೆ. ಡಿಮ್ಯಾಂಡ್ ನೋಡಿಕೊಂಡು ಒಬ್ಬೊಬ್ಬರಿಗೂ ಸ್ವಲ್ಪ ಸ್ವಲ್ಪ ಕೆಲಸಮಾಡುವುದಕ್ಕೆ ಕೊಡುತ್ತಿದ್ದೇವೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಎರಡು ವರ್ಷಗಳ ಹಿಂದೆ ಹಣಕೊಟ್ಟಿರುವ ಅರ್ಜಿದಾರರುಗಳಿಗೆ ಬುಲ್‌ಡೋಸರುಗಳ ಸಹಾಯ ದೊರಕಿಸಿಕೊಡದೆ 6 ತಿಂಗಳ ಹಿಂದೆ, ಎಂಟು ದಿನಗಳ ಹಿಂದೆ ಹಣಕೊಟ್ಟಿರುವವರಿಗೆ ಇದರ ಸಹಾಯ ಕೊಡುವುದು ಸರಿಯೇ?

ಡಾ॥ ಆರ್. ನಾಗನಗೌಡ.—ಹಾಗೆ ಮಾಡಿದಂತೆ ಕಾಣುವುದಿಲ್ಲ. ಇದಕ್ಕೆ ಪೂರ್ವದಲ್ಲಿ ಹಣಕೊಟ್ಟವರಿಗೆ ಬುಲ್‌ಡೋಸರುಗಳನ್ನು ಕೊಟ್ಟಿದ್ದಾರೆ. ತಾವು 8 ದಿನಗಳ ಹಿಂದೆ ಹಣ ಕೊಟ್ಟಿದ್ದವರಿಗೆ ಸಪ್ಲೈ ಮಾಡಿದರೆಂದು ಹೇಳುವುದಾದರೆ ಅದನ್ನು ವಿಚಾರಿಸುತ್ತೇನೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಇಂಥ ಬುಲ್‌ಡೋಸರು ಇಂಥ ಕಡೆಯೇ ಕೆಲಸಮಾಡಬೇಕೆಂದಿದೆಯೆ?

ಡಾ॥ ಆರ್. ನಾಗನಗೌಡ.—ಡಿಸ್ಟ್ರಿಕ್ಟ್ ಆಫೀಸರುಗಳು ಯಾವುದನ್ನು ಯಾರಿಗೆ ಕೊಡಬೇಕೆಂದು ಯೋಚನೆಮಾಡಿ ಕೊಡುತ್ತಾರೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಇಂಥ ಬುಲ್‌ಡೋಸರನ್ನು ಇಂಥ ದಿನ ಕೊಡುವುದಕ್ಕೆ ಸಾಧ್ಯ, ಇಂಥ ದಿನ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಅರ್ಜಿದಾರರುಗಳಿಗೆ ತಿಳಿಸುವುದಕ್ಕೆ ಸಾಧ್ಯವೇ?

ಡಾ॥ ಆರ್. ನಾಗನಗೌಡ.—ನಮ್ಮಲ್ಲಿ ಬುಲ್‌ಡೋಸರುಗಳಿರುವುದು ಕೆಲವೇ. ಅವೂ ಆಗಾಗ್ಗೆ sick ಆಗುತ್ತವೆ. ನ್ಯಾಯವಾಗಿ ಒಂದೊಂದು ಬುಲ್‌ಡೋಸರು ವರ್ಷಕ್ಕೆ 2,000 ಗಂಟೆಗಳು ಕೆಲಸಮಾಡಬೇಕೆಂದಿದೆ. ಆದರೆ, ಅವು ಈಗ ಕೆಲಸ ಮಾಡಿರುವುದನ್ನು ನೋಡಿದರೆ ಅವು economical ಆಗಿ ಕೆಲಸ ಮಾಡಿಯೇ ಇಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ಪರಿಸ್ಥಿತಿ ಹೀಗಿರುವಾಗ ಹೀಗೆ ಮುಂಗಡವಾಗಿ ವಿಪರೀತ ಹೊಬಲಗನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸುತ್ತೀರಾ?

ಡಾ॥ ಆರ್. ನಾಗನಗೌಡ.—ಅದು ನ್ಯಾಯ ಎಂದು ನಾನೂ ಒಪ್ಪುತ್ತೇನೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಹೀಗೆ ಹೆಚ್ಚಿಗೆ ಮುಂಗಡಕೊಟ್ಟು ಬುಲ್‌ಡೋಸರುಗಳನ್ನು ತರಿಸಲಿಕ್ಕೆ ಬಸ್‌ನಲ್ಲಿ ಓಡಾಡಿಯೇ 200-300 ರೂಪಾಯಿಗಳನ್ನು ಖರ್ಚುಮಾಡಿ ಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

(No answer.)

Standing Orders re: issue of loans for purchase of electric pump sets.

Q.—879. **Sri B. N. RAME GOWDA** (Sira).—

Will the Government be pleased to state:—

(*a*) the Standing Orders regarding issue of loans for providing electric pump sets for raiyats;

(*b*) the modifications that were effected in the Standing Orders for the last one year;

(*c*) whether it has come to their notice that the modifications effected do not serve the best interests of the raiyats?

A,—**Dr. R. NAGAN GOWDA** (Minister for Agriculture).—

(*a*) The Electrical Department issues on "Hire Purchase System" Irrigation Pumping sets with zinc sheets, G.I. pipes, bends, cement and all other accessories and also assists the raiyats in installing the pumping

(DR. .R NAGAN GOWDA.)

sets, wiring the installations and erecting the shed to house the pump by entrusting the work to Licensed Electrical Contractors after calling for quotations. The value of materials supplied is payable in eight instalments. A copy of the approved form of agreement is placed on the table of the House. (Copy placed in the Legislature Library. (*Vide* No. 28—L.A. of 1954.)

(*b*) Under the order that was in force over a year ago, distribution of Irrigation Pumping Sets was being done by the Food Production Department. According to the orders issued in April 1953 this work was transferred to the Electrial Department and the latter was authorised to supply G.I. Pipes and sheets also. In a subsequent order issued in August 1953, option was given to the consumer to select the pump of his choice and it was also directed that the department may supply all accessories.

(*c*) No.

ಶ್ರೀ ಬಿ. ಎಕ್. ರಾಮೇಗೌಡ.—ಈಗ ಒಂದು ವರ್ಷ ದಿಂದೀಚೆಗೆ ಇಲ್ಲಿ ತಾವು ಹೇಳಿರುವಂತೆ ಜಿಂಕ್‌ಷೀಟು ಗಳನ್ನೂ, ಜಿ. ಐ. ಪೈಪುಗಳನ್ನೂ ಮುಂತಾದ ಯಾವ ಸಾಮಾನುಗಳನ್ನೂ ಪಂಪುಸೆಟ್ಟಿನ ಜೊತೆಗೆ ಸಪ್ಲೈ ಮಾಡುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಹೈರ್ ಪರ್ಚೇಸ್ ಪ್ರಕಾರ ಪಂಪು, ಮೋಟಾರು, ಜಿಂಕ್‌ಷೀಟುಗಳು, ಪೈಪುಗಳು, ಬೆಂಡ್ಸ್‌ಗಳು ಕೊಡುತ್ತಿದ್ದೇವಲ್ಲಾ; ಷೆಡ್ಡುಗಳನ್ನು ಹಾಕಿಕೊಳ್ಳುವುದಕ್ಕೂ ಸಹಾಯಮಾಡು ತ್ತಿದ್ದೇವೆ. ಎಲ್ಲಿ ಬಂದಿಲ್ಲ ಎಂದು ತಿಳಿಸಿದರೆ ವಿಚಾ ರಿಸುತ್ತೇವೆ.

ಶ್ರೀ ಬಿ. ಎಕ್. ರಾಮೇಗೌಡ.—ಈಗ ಹಾಲ ಇಲಾಖೆಯಲ್ಲಿ ದಾಸ್ತಾನು ಮಾಡಿರತಕ್ಕ ಪೈಪುಗಳನ್ನು ದಾಸ್ತಾನುಮಾಡಿ ಎಷ್ಟು ದಿವಸವಾಯಿತು?

ಡಾ॥ ಆರ್. ನಾಗನಗೌಡ.—ಆ information ಈಗ ನನ್ನಲ್ಲಿಲ್ಲ.

ಶ್ರೀ ಬಿ. ಎಕ್. ರಾಮೇಗೌಡ.—ಈಗ ಇಲಾಖೆಯಲ್ಲಿ ಕೊಡುತ್ತಿರುವ ಪೈಪುಗಳ ದರಕ್ಕೂ, ಮಾರ್ಕೆಟ್ಟಿನಲ್ಲಿರುವ ಪೈಪುಗಳ ಬೆಲೆಗೂ ಬಹಳ ವ್ಯತ್ಯಾಸವಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಸ್ವಲ್ಪ ವ್ಯತ್ಯಾಸ ವಿದೆ. ಬೇರೆ ಪ್ರಶ್ನೆ ಪ್ರತ್ಯೇಕವಾಗಿ ಕೇಳಿದರೆ ಅದರ ವಿಷಯ ತಿಳಿಸುತ್ತೇನೆ.

ಶ್ರೀ ಬಿನ್. ರಾಮೇಗೌಡ.—ಈ ರೀತಿಯಾಗಿ ವ್ಯತ್ಯಾಸವಿದ್ದರೆ ರೈತರಿಗೆ ಅನ್ಯಾಯಮಾಡಿದಂತಾ ಗುತ್ತದೆಂಬುದನ್ನು ಒಪ್ಪುತ್ತೀರಾ?

ಡಾ॥ ಆರ್. ನಾಗನಗೌಡ,–ಹಾಗಲ್ಲ. ಇನ್ನೊಂದು ಸಂದರ್ಭದಲ್ಲಿ ಇದೇ ಪ್ರಶ್ನೆ ಬಂದಿದ್ದಾಗ ಅದಕ್ಕೆ ಸರಿ ಯಾಗಿ ಜವಾಬು ಕೊಟ್ಟಿದ್ದೇನೆ.

Sri V. MASIYAPPA.—Will the Government examine the possibility of allowing the raiyats to purchase in the open market, the amount of the hire purchase loans being paid by the Government as was being done previously in the case of oil engines supplied through the food production department?

Dr. R. NAGAN GOWDA.—Now as it is, we allow the applicant to select his own pump and motor. If he also wants to purchase tyres and things like that, I think that question will be considered; but I do not know if the Hon'ble Member wants it to be done as a general rule.

ಶ್ರೀ ವಿ. ಮಸಿಯಪ್ಪ.—ನಾನು ಕೇಳುತ್ತಿರುವುದು: ಈಗ ಸರ್ಕಾರದವರು quotations call for ಮಾಡಿ quoted rates ಮೇಲೆ ಕೆಲವು dealers ನೇಮಕಮಾಡಿದ್ದೀರಿ; ಅವರಿಂದ ರೈತರು ತೆಗೆದು ಕೊಳ್ಳಬೇಕು. ಇದಕ್ಕೆ ಬದಲು ರೈತರೇ ನೇರವಾಗಿ open marketನಲ್ಲಿ ಪಂಪುಗಳನ್ನೂ ಮೋಟಾರು ಗಳನ್ನೂ ಕೊಂಡುಕೊಳ್ಳಲು ಒಪ್ಪಿ ಅವನ್ನು hire purchase ಮೇಲೆ ರೈತರಿಗೆ ಕೊಡುವುದು ಸೂಕ್ತ ವಲ್ಲವೆ, ಎಂದು.

ಡಾ॥ ಆರ್. ನಾಗನಗೌಡ.—Quotations call for ಮಾಡಿ S. P. C. ಮೂಲಕ ಕೊಂಡು ಕೊಂಡರೆ ಕಡಮೆ ಬೆಲೆಯಾಗಬಹುದೆಂದು ಈಗ ಹಾಗೆ ಮಾಡುತ್ತಿದೆ. ಈಗಲೂ ಪಂಪುಗಳು ಮತ್ತು ಮೋಟಾರುಗಳು ರೈತರು ತಮಗೆ ಬೇಕಾದುವನ್ನು ಹಾಕಿಕೊಳ್ಳುವುದಕ್ಕೆ ಅವಕಾಶ ಹೂಡಿದ್ದೇವೆ. ರೈತ ತನಗೆ ಯಾವುದು ಬೇಕೆಂದರೆ ಅದನ್ನು ಚುನಾಯಿಸಿ ಕೊಳ್ಳುವುದಕ್ಕೆ ಅವಕಾಶವುಂಟು.

ಶ್ರೀ ವಿ. ಮಸಿಯಪ್ಪ.—ರೈತ ತಾನೇ ಪೇಟೆಯಲ್ಲಿ ನೇರವಾಗಿ ಕೊಂಡುಕೊಂಡರೆ, ಕಡಮೆ ದರದಲ್ಲಿ ಸಿಕ್ಕುತ್ತದೆಂದು ಸರ್ಕಾರದ ಗಮನಕ್ಕೆ . . . .

ಡಾ॥ ಆರ್. ನಾಗನಗೌಡ.—ಪೇಟೆಧಾರಣೆಗೂ ಇದಕ್ಕೂ ಬಹಳ ವ್ಯತ್ಯಾಸವಿದೆಯೆಂದು ಅರ್ಜಿ ನಮಗೆ ಬಂದರೆ ಅಥವಾ ನಮ್ಮ ಗಮನಕ್ಕೆ ತಂದರೆ, ಸೂಕ್ತ ಅನುಕೂಲ ಮಾಡುತ್ತೇವೆ.

ಶ್ರೀ ವಿ. ಮಸಿಯಪ್ಪ.—ಹೈರ್ ಪರ್‌ಚೇಸ್ ಮೇಲೆ ನರಬರಾಯಿ ಮಾಡತಕ್ಕ ಸಂದರ್ಭದಲ್ಲಿ ಯಾವುದೇ variety ಬೇಕಾದರೂ ಕೊಡುತ್ತೇವೆಂದು ಹೇಳುವಾಗ ಈ ರೀತಿ ಕೊಡದೆ, 'ನಮ್ಮಲ್ಲಿ ಯಾವುದೋ ಕೆಲವು variety ಇವೆ, ಅವನ್ನು ಮಾತ್ರ ತೆಗೆದುಕೊಳ್ಳಬೇಕು, 'B. T. H. ಬೇಕಾದರೆ ಕೆಲವು ಕಾಲ ಕಾಯಬೇಕು' ಎಂದು ಇಲಾಖೆಯವರು ಹೇಳಿದ್ದರಿಂದ ಕೆಲಸಗಳು ನಿಂತಿರುವುದು ತಮ್ಮ ಗಮನಕ್ಕೆ.....

Mr. SPEAKER.—You are making a statement rather than putting a question.

ಶ್ರೀ ವಿ. ಮಸಿಯಪ್ಪ.—B. T. H. ಮೋಟಾರು ಬೇಕೆಂದು ರೈತರು ಕೇಳಿದರೆ ಅದು ಇಲ್ಲವೆಂದು ಹೇಳಿದ್ದರಿಂದ pump installations ತಡವಾಗು ತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಡಾ॥ ಆರ್. ನಾಗನಗೌಡ.—B. T. H. ಮೋಟಾರ್‌ಗಳು ಬೇಕೆಂದರೆ, ನಾವು ಯೋಚನೆ ಮಾಡುತ್ತೇವೆ. ಆ ರೀತಿ ಆಗಿರುವುದು ನನ್ನ ಗಮನಕ್ಕೆ ಬಂದಿಲ್ಲ.

Hirebhasgar Reservoir.

Q.—542. **Sri S. GOPALA GOWDA** (Sagar–Hosanagar).—

Will the Government be pleased to state :—

(*a*) the names of the persons who advised the construction of Hirebhasgar Reservoir and the date when such advice was given, how many recommendations had been received in that connection and what was the recommendation that was accepted by the Government;

(*b*) the date of commencement of the construction of the reservoir; the date on which it was completed and the total amount of capital expended thereon;

(*c*) the extent in square miles that become submerged under the reservoir, what is the amount given by Government so far to the private people for the lands and properties affected in this connection (details regarding garden, wet, dry, building, etc., to be given);

(*d*) within the submersion area, how much area of land has not submerged, though surrounded by water; what is the population at present in that area; what are the lands and properties in respect of which (i) compensation has been given and (ii) compensation has not been given (details to be given as to garden, dry, wet, building, etc.);

(*e*) in respect of lands for which compensation has been given, how many acres of land have been given out for cultivation; out of the persons that are cultivating, how many are tenants; and in how many cases the persons who obtained compensation are themselves cultivating; what is the total annual land revenue derived by the Government on this account (for the years 1953, 52 and 51);

(*f*) within the submersion area, (i) the number of miles of road at present existing (classwar), (ii) the names of places having schools, postal facilities and hospitals, (iii) the nature of transport facilities like railways, buses, etc. ?

A.—**Dr. R. NAGAN GOWDA** (Minister for Agriculture).—

(*a*) The Hydro-Electric Committee which was constituted to deal with the major problems relating to Mahatma Gandhi Hydro-Electric Project approved of the construction of the Reservoir at its second meeting held on 18th April 1939.

Three alternative sites were considered and the Hirebhasgar site was finally selected.

(*b*) 1939 and 1948.

Rs. 112.15 lakhs.

(*c*) 31.94. The total amount paid as compensation is Rs. 25,60,490. Area acquired under each kind of land is given below :—

Dry		*Wet*		*Bagayet*	
A.	G.	A.	G.	A.	G.
1,942	21	8,086	10	346	04

Khate Khan		*Buildings*
A.	G.	
699	31	423

Details of amounts paid for each kind of property are not readily available.

(*d*) Information is not readily available regarding the first and last parts of the question.

Total population in that area is 30,490.

(*e*) 1,223 acres and 6 guntas have been given for cultivation.

Tenants	...	...	288
Khatedars	...	...	50

The revenue realised by leasing out the lands is given below :—

1951.	*1952.*
Rs. 4,453-10-0	Rs. 4,880-0-0

1953.

Rs. 11,012-7-0